ಅಲ್ಲಿ ದೆವ್ವಗಳು ಇದ್ದಾವೆ ಎಂದು ಹೇಳುತ್ತಾರೆ. ಅದನ್ನು ಯಾರೂ ನೋಡಿಲ್ಲ. ನೋಡಿದೆವು ಅಂತಾ ಹೇಳುವವರೂ ಯಾರೂ ಇಲ್ಲ. ಬರೀ ಬಾಯಿ ಮಾತುಗಳು. ಆದರೂ ಜನ ರಾತ್ರಿ ಅಲ್ಲಿ ಓಡಾಡಲು ಹೆದರುತ್ತಾರೆ. ಅದೂ ಅಮಾವಾಸ್ಯೆಯ ದಿನದಲ್ಲಿ.

"ಎಲ್ಲಿಗೆ ಹೋಗಬೇಕು ಸ್ವಾಮಿ?" ಟೀ ಅಂಗಡಿಯವ ಪ್ರಶ್ನಿಸಿದ.

"ಹುಣಸೇನ ಹಳ್ಳಿಗೆ ಹೋಗಬೇಕು... ಮಾಳ್ಯಾ ದಾಟಿ ಮುಂದೆ ಐದು ಕಿಲೋಮೀಟರ್... ಆ ಮಾಳ್ಯಾ ಗ್ರಾಮದ ಹತ್ತಿರ ದೆವ್ವಗಳು ಇದ್ದಾವಂತೆ ನಿಜವಾ?" ನಿಧಾನವಾಗಿ ಬಿಸಿ ಬಿಸಿ ಟೀ ಹೀರುತ್ತಾ ಕೇಳಿದ ರವಿ.

"ದುಡಿಯುವವರಿಗೆ ಯಾವ ದೆವ್ವ, ಭೂತ ಸ್ವಾಮಿ... ಭಯ ಅನ್ನೋದೇ ಒಂದು ದೆವ್ವ. ನನ್ನ ಮನೆ ಇರೋದೇ ಸ್ಮಶಾನದ ಪಕ್ಕದಲ್ಲಿ. ನನಗೆ ಯಾವತ್ತೂ ಕಾಣಿಸಿಲ್ಲ" ನಗುತ್ತಾ ಆ ಟೀ ಅಂಗಡಿಯವ ನುಡಿದ. ಇಡೀ ಹೈವೇ ರೋಡಿನಲ್ಲಿ ಯಾರೂ ಇರಲಿಲ್ಲ. ಹೈವೇಯಿಂದ ಮಾಳ್ಯಾ ಕಡೆ ಹೋಗಲು ಬಲತಿರುವಿನಲ್ಲಿ ಇತ್ತು ಅವನ ಶಾಪ್! ಇಷ್ಟು ಹೊತ್ತಿನ ತನಕ ಯಾಕೆ ತೆರೆದುಕೊಂಡಿದ್ದಾನೆ? ಯಾರು ಬರುತ್ತಾರೆ ಇಲ್ಲಿಗೆ? ಎಂದು ರವಿ ಯೋಚಿಸ ತೊಡಗಿದ.

"ಸರ್! ಸಿಗರೇಟ್ ಏನಾದರೂ ಬೇಕಾ? ಬಾಗಿಲು ಹಾಕ್ತಾ ಇದ್ದೀನಿ..." ಆಗ ನೆನಪಾಯಿತು ರವಿಗೆ... ತನ್ನ ಜೇಬಿನಲ್ಲಿದ್ದ ಸಿಗರೇಟ್ ಖಾಲಿ ಆಗಿದೆ ಎಂದು. "ಸರಿ ಒಂದು ಪ್ಯಾಕ್ ಕೊಡು..." 500ರ ನೋಟನ್ನು ಕೊಡುತ್ತಾ ಕೇಳಿದ.

"ಸ್ವಾಮಿ, ಚಿಲ್ಲರೆ ಇಲ್ಲ. ನಾಳೆ ಇದೇ ದಾರಿಯಲ್ಲಿ ಬಂದರೆ ಇಸಿದುಕೊಳ್ಳುತ್ತಿರಾ?" ಸಿಗರೇಟ್ ಬೇಡ ಅನ್ನಲಾಗದೆ, ಬೇರೆ ಯಾವ ಚಿಲ್ಲರೆ ಇಲ್ಲದಿದ್ದುದರಿಂದ, ಒಲ್ಲದ ಮನಸ್ಸಿನಿಂದಲೇ ಒಪ್ಪಿ, ಸಿಗರೇಟ್ ಪ್ಯಾಕೆಟ್ ಜೇಬಿನಲ್ಲಿ ಹಾಕಿ ಬೈಕ್ ಹತ್ತಿದ. ಕೊಂಚ ದೂರ ಹೋಗಿ, 'ಬೇಡಾ ಈ ಸಿಗರೇಟ್... ನಾಳೆ ಇವನನ್ನು ಯಾರು ಹುಡುಕುವರು... ಈಗ ಲೈಟರ್ ಬೇರೆ ಇಲ್ಲ... ವಾಪಸ್ ಕೊಟ್ಟು ದುಡ್ಡು ಇಸಿದುಕೊಳ್ಳುವುದೇ ಲೇಸು' ಎಂದುಕೊಂಡು ತಿರುಗಿ ನೋಡಿದ. ಅಲ್ಲಿ ಏನೂ ಕಾಣಿಸಲಿಲ್ಲ!

'ಅರೇ... ಇಷ್ಟು ಬೇಗ ಬಾಗಿಲು ಹಾಕಿದನಾ?' ಎಂದುಕೊಂಡು... ಬೈಕ್‌ನ ವೇಗ ಹೆಚ್ಚಿಸಿದ. ಆ ಕ್ಷಣಕ್ಕೆ ತರ್ಕ, ಭಯವನ್ನು ಗೆದ್ದಿತು. ಆಷಾಢದ ಗಾಳಿಯನ್ನು ಸೀಳುತ್ತಾ, ರವಿ ಬೈಕ್ ಅನ್ನು ಓಡಿಸತೊಡಗಿದ. ಅದ್ಯಾಕೋ ಬೈಕ್‌ನ ವೇಗ ಅವನ ಹಿಡಿತದಲ್ಲಿ ಇಲ್ಲ ಅಂತ ಅನಿಸುತ್ತಿತ್ತು. ವೇಗದ ಗಾಳಿ ಅವನ ಎದೆಗೆ ಹೊಡೆದು ಹೋಗುತ್ತಿರುವಾಗಲೂ, ಅವನಿಗೆ ಬೈಕ್‌ನ ವೇಗ ತಗ್ಗಿಸಲಾಗುತ್ತಿಲ್ಲ.

'ಭಯಕ್ಕೆ ಬೇಗ ಮನೆಗೆ ಸೇರಬೇಕೆಂಬ ಬಯಕೆಗೆ ಹೀಗೆ ಆಗುತ್ತಿದೆ' ಎಂದುಕೊಂಡ. ದೂರ ದೂರಕ್ಕೆ ಯಾವುದೇ ಒಂದು ದೀಪವಿಲ್ಲ. ಇಡೀ ರಸ್ತೆಗೆ ನಾನೊಬ್ಬನೇ ನಿಶಾಚರನಂತೆ ಎಂದುಕೊಂಡು ನಗುತ್ತಾ ಮುನ್ನುಗ್ಗಿದ. ಬೈಚಾಪುರ ಕ್ರಾಸ್ ಬಳಿ ಎಡಕ್ಕೆ ತಿರುಗಿದರೆ ಅಲ್ಲಿಂದ ಮುಂದೆ ಮಾಳ್ಯಾ... ಅಪ್ರಯತ್ನಕವಾಗಿ ಊರಿನ ಕಡೆ ತಿರುಗಿ ನೋಡಿದ. ಇಡೀ ಊರಿಗೆ ಊರೇ ಸ್ತಬ್ಧ! ಊರಿನಲ್ಲಿ ಯಾವ ಬೆಳಕಿನ ಸುಳಿವೂ ಇರಲಿಲ್ಲ.

'ಇಲ್ಲೊಬ್ಬ ಪಂಚರ್ ಶಾಪ್‌ನವನು ಇರಬೇಕಿತ್ತಲ್ಲವಾ... ಎಲ್ಲಿ ಹೋದ?...' ಎಂದುಕೊಳ್ಳುತ್ತಾ ಅತ್ತಿತ್ತ ನೋಡಿದ. ಅವನು ಎಲ್ಲಿಯೂ ಕಾಣಲಿಲ್ಲ. 'ಎಲ್ಲರೂ ಅಮಾವಾಸ್ಯೆ ಅಂತಾ ಹೆದರಿ ಗೂಡು ಸೇರಿದ್ದಾರೆ' ಎಂದುಕೊಂಡು ಬೈಕ್‌ನ ವೇಗ ಹೆಚ್ಚಿಸಿದ. ಮಾಳ್ಯಾ ಗ್ರಾಮ ಕಾಣಿಸುತ್ತಿದೆ. ಇನ್ನೊಂದೆರಡು ಮೂರು ಕಿ.ಮೀ ಇರಬೇಕು. ಅಲ್ಲಿಂದ ಐದಾರು ನಿಮಿಷ ಮನೆ... ಉತ್ಸಾಹದಿಂದ ಬೈಕ್‌ನ ವೇಗ ಹೆಚ್ಚಿಸಲು ನೋಡಿದ. ಅಲ್ಲಿಯ ತನಕ ಬೇಡವೆಂದರೂ ವೇಗವಾಗಿ ಹೋಗುತ್ತಿದ್ದ ಬೈಕ್, ಎಷ್ಟೇ ವೇಗ ಹೆಚ್ಚಿಸಿದರೂ ಓಡುತ್ತಿಲ್ಲ. ಯಾರೋ ಎಡಕ್ಕೆ ತಳ್ಳಿದ ಅನುಭವ! ಇಡೀ ಗಾಡಿ ಅಲ್ಲಾಡುತ್ತಿದೆ...